ಸಂಪೂರ್ಣ ಸಫಲ ಕಾರ್ಯಕ್ರಮ.

ಶಿಲ್ಪಾ ಮೂರ್ತಿ
kannadabalaga@kannadabalaga.co.uk
ಕನ್ನಡಬಳಗ ಯುಕೆ

ಕನ್ನಡಬಳಗ ಯುಕೆಯು ೪ನೇ ಏಪ್ರಿಲ್ ೨೦೦೯ರಂದು ಆಚರಿಸಿದ ಯುಗಾದಿ ಹಬ್ಬಕ್ಕೆ ಬ್ರೈಟನ್ನಿಗೆ (to Brighton) ಧಾವಿಸುವುದು ಒಂದು ಉತ್ಸಾಹಕರವಾಗಿದ್ದು ಅಲ್ಲಿ ಆಗಮಿಸಿದ್ದ ಆಂಗ್ಲನಾಡಿನ ಎಲ್ಲಾ ಕನ್ನಡಿಗರನ್ನು ಭೇಟಿಯಾಗುವುದು ಬಹು ಸಡಗರವಾಗಿತ್ತು. ನೊಂದಣೆಮಾಡಿಸಿ ನಮ್ಮ ಬ್ಯಾಡ್ಜ್ ಗಳನ್ನು ಪಡೆದಕೂಡಲೇ ಅಪ್ಪುಗೆಗಳು ಮತ್ತು ಚುಂಬನಗಳು ಮೇಲಿಂದಮೇಲೆ ಬರತೊಡಗಿದವು. ಎಲ್ಲರೂ ಬಣ್ಣಬಣ್ಣದ ಭಾರತೀಯ ಉಡುಗೆಗಳನ್ನು ತೊಟ್ಟು ಮುಗುಳ್ನಗುತ್ತಿದ್ದರು. ನನಗೂ ಯುಗಾದಿಯ ಸಿಹಿತಿಂಡಿಗಳು ನೊಂದಣೆಯ ಮೇಜಿನಬಳಿ ದೊರೆತದ್ದು ಬಹು ಖುಷಿಯಾಯಿತು.
ಈ ಸಮಾರಂಭದ ಅತಿ ಕುತೂಲಕರವಾದುದ್ದೇನೆಂದರೆ, ಗೋಡೆಯಮೇಲೆ ಪ್ರದರ್ಶಿಸಿದ್ದ ಹೋದ ವರ್ಷ ಆಗಸ್ಟ್ ೨೦೦೮ನಲ್ಲಿ ನಡೆದ ರಜತಮಹೋತ್ಸವದಲ್ಲಿ ತೆಗೆದ ನಮ್ಮ ಛಾಯಾಚಿತ್ರಗಳು. ಆವುಗಳು ನಮ್ಮಲ್ಲಿ ಅಡಗಿದ್ದ ಒಲುವಿನ ಹಳೆಯ ನೆನಪುಗಳನ್ನೆಲ್ಲಾ ಹೊರಹೊಮ್ಮಿಸಿದವು. ಅಲ್ಲದೆ ಅವುಗಳು ಆ ದಿನ ಬರದೇ ಇದ್ದವರು ಇವನ್ನು ಅನುಭವಿಸಲಾಗದೆ ಹೋದರಲ್ಲಾ ಎಂದು ನನಗೆ ವ್ಯಸನವಾಯಿತು.

ಶುರುವಿನಲ್ಲಿ ಬಹು ರುಚಿಕರವಾದ ಮಧ್ಯಾಹ್ನದ ಉಪಹಾರದೊಂದಿಗೆ ನಮ್ಮ ಹಬ್ಬದದಿನ ಆರಂಭವಾಯಿತು. ಬಹು ವಿನೋದಕರ ನಿವೇದಿತನಾದ ಪ್ರಫುಲ್ ಅವರು ಕಾರ್ಯಕ್ರಮಗಳನ್ನು ಆರಂಭಿಸಿದರು.
ಹೋವ್ ನಗರದ ಮೇಯರಾದ ಕೌನ್ಸಿಲರ್ ಗ್ಯಾರಿ ಪೆಲ್ಟ್ಸರ್-ಡನ್ ಮತ್ತು ಅವರ ಪತ್ನಿ ಚಿಪ್ ಪೆಲ್ಟ್ಸರ್-ಡನ್ ಅವರುಗಳು ಆ ದಿನದ ಮುಖ್ಯ ಅತಿಥಿಗಳಾಗಿದ್ದರು. ಶ್ರೀಯತ ಮೇಯರ್ ಅವರು ಒಂದು ಚಿಕ್ಕ ಮಧುರ ಭಾಷಣ ಮಾಡಿದಮೇಲೆ ಶ್ರೀಮತಿ ಮೇಯರ್ ಅವರು ನಮ್ಮ ಪುಟ್ಟ ಮಕ್ಕಳಿಗೆ ಒಂದು ಹೊಸ ನೃತ್ಯಗೀತೆಯನ್ನು ಹೇಳಿಕೊಟ್ಟರು. ನಂತರ ನಮ್ಮ ಸದಸ್ಯರಾದ ಮಾನ್ಯ ರವಿಶಂಕರ್ ಅವರು 'ಯುಗಾದಿ'ಯ ಬಗ್ಗೆ ಖಗೋಳಜ್ಞಾನದ ಪ್ರಕಾರ ವಿವರಿಸಿದರು. ನಂತರ ಇಬ್ಬರು ಪುಟಾಣಿಗಳಿಂದ ಪಿಟೀಲು ವಾದನದಿಂದ ಗಣೇಶನನ್ನು ಪ್ರಾರ್ಥಿಸಲಾಯಿತು. ಆ ನಂತರ ಅರುಣ್ ಕುಕ್ಕೆ ಮತ್ತು ಅನಿಲ್ ಕುಮಾರ್ ಅವರುಗಳು ಶಾಸ್ತ್ರೀಯ ಸಂಗೀತವನ್ನು ಹಾಡಿದರು. ಅತಿ ಕಲ್ಪನಾಮಯವಾದ ಎರಡು ನೃತ್ಯಗಳಲ್ಲಿ, ಮೊದಲನೆಯದಾಗಿ ಶಿಲ್ಪ ಮತ್ತು ಸುಪ್ರಿಯ ಅವರಿಂದ ಬಾಲಿವುಡ್ ನೃತ್ಯ ಮತ್ತು ಎರಡನೆಯದಾಗಿ ಕುಮಾರಿ ವಿದ್ಯ ಅವರಿಂದ ಆಧುನಿಕ ಕಥಕ್ ನೃತ್ಯಗಳು ಅತ್ಯಂತ ಕಲ್ಪನಾಮಯವಾಗಿದ್ದವೆಂದು ನನಗೆ ಅನಿಸಿತು.

ಇವೆಲ್ಲವೂ ಆದನಂತರ ನಮ್ಮ ಮೂರನೆಯ ಪೀಳಿಗೆಯ ಪುಟಾಣಿ ಮಕ್ಕಳು ಶಿಶುಗೀತೆಗಳಿಂದ ನಮ್ಮೆಲ್ಲರನ್ನು ಅತಿ ಉಲ್ಲಾಸದಿಂದ ಮನರಂಜಿಸಿದರು. ಕನ್ನಡಬಳಗ ಯುಕೆಯು ಮಕ್ಕಳನ್ನು ತಮ್ಮ ಅಭಿನಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಉತ್ತೇಜಿಸುತ್ತಿರುವು ಒಂದು ಶ್ಲಾಘನೀಯ. ಮಧಾಹ್ನದ ಅಂತ್ಯದಲ್ಲಿ ಕನ್ನಡಬಳಗದ ವಾರ್ಷಿಕ ಸಾರ್ವತ್ರಿಕ ಸಭೆಯನ್ನು ಕರೆಯಲಾಯಿತು. ಆ ಸಭೆಯಲ್ಲಿ ಕನ್ನಡಬಳಗದ ಎಲ್ಲಾವಿಚಾರಗಳಬಗ್ಗೆ ಪ್ರಸ್ತಾಪಿಸಲಾಯಿತು. ಕನ್ನಡಬಳಗವು ಮುಂದಿನ ವರ್ಷದ ಕಾರ್ಯಕ್ರಮಗಳನ್ನೆಲ್ಲವನ್ನೂ ಯುವಪೀಳಿಗೆಯು ಆಚರಿಸುವದಕ್ಕೆ ಅವಕಾಶವನ್ನು ಕೊಡುವುದಾಗಿ ಭರವಸೆ ನೀಡಿತು. ಇದು ಯುವಕನ್ನಡಿಗರು ಕಾರ್ಯಕ್ರಮಗಳಲ್ಲಿ ಹೆಚ್ಚು ಭಾಗವಹಿಸಲು ಅನುವಾಗುವುದೆಂದು ನನಗನಿಸುತ್ತದೆ.

ಕೊನೆಯದಾಗಿ ಮತ್ತುಎಲ್ಲಕಿಂತಲೂ ಉತ್ತಮವಾದುದೇನೆಂದರೆ ಸಾಯಂಕಾಲದ ಮನರಂಜನೆಯ ಕಾರ್ಯಕ್ರಮಗಳು. ಕರ್ನಾಟಕದ ಉದಯ ಟಿವಿಯಲ್ಲಿ ಪ್ರಸರಿತವಾದ ಸಿಲ್ಲಿಲಲ್ಲಿ ಎಂಬ ಕಾರ್ಯಕ್ರಮದಮೇಲೆ ಆಧಾರಿತವಾದ ನಮ್ಮದೇಆದ ಸಿಲ್ಲಿಲಲ್ಲಿ ಕಾರ್ಯಕ್ರಮ ಪ್ರಸರಿತವಾಯಿತು. ಇದರಲ್ಲಿ ಭಾಗವಸುವವರು ತಮ್ಮ ಆತ್ಮೀಯರ ಭಾವಗಳನ್ನು (ಸಿಹಿ ಮತ್ತು ಕಹಿ) ಅನುಕರುಣಿಸುವ ನಿಯಮವಿದ್ದಿತು. ಎಲ್ಲಾ ವಯಸ್ಸಿನವರೂ ಅದರಲ್ಲಿ ಭಾಗವಹಿಸಿ ನಿರತರಾಗಲು ಅನುವಾದದರಿಂದ ಅದು ಬಹಳ ಉಲ್ಲಾಸಕರವಾಗಿದ್ದಿತು. ಈ ರೀತಿಯ ಕಾರ್ಯಕ್ರಮಗಳು ಎಲ್ಲರೂ ಒಂದುಗೂಡಿ ಇನ್ನೂ ಆತ್ಮೀಯರಾಗಿ ಮತ್ತು ಅವರಿಗೆ ನಮ್ಮ ಸಂಸ್ಥೆಯಲ್ಲಿ ಇನ್ನೂ ಹೆಚ್ಚಾಗಿ ಆಸಕ್ತಿಯನ್ನು ಉಂಟು ಮಾಡುವುದು.

ನಮ್ಮಂಥ ಎರಡನೆಯ ಕನ್ನಡ ಪೀಳಿಗೆಯವರೂ ಕೂಡ ಈ ಮನರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆವು. ಕುಮಾರಿ ಸುಪ್ರಿಯ ಆಧುನಿಕ ಫ್ಯೂಶನ್ ನೃತ್ಯವನ್ನು ಬಾಲಿವುಡ್ ಹಾಡುಗಳಿಗೆ ಅಳವಡಿಸಿದ್ದರು. ನಾನು ಮತ್ತು ಸುಪ್ರಿಯ ಹಿಂದಿ ಮತ್ತು ಕನ್ನಡ ಹಾಡುಗಳಿಗೆ ನೃತ್ಯಿಸಿದೆವು. ನಮ್ಮ ಉಗಾದಿಯ ಹಬ್ಬಕ್ಕಾಗಿಯೇ ರಚಿಸಿದ ಹಾಡಿಗೆ ತಕ್ಕಂತೆ ಮಾಡಿದ ನೃತ್ಯವು ಅತ್ಯಂತ ಉತ್ತಮವಾಗಿದ್ದಿತು. ಪ್ರೇಕ್ಷಕರಿಂದ ಈ ನೃತ್ಯವು ಅತ್ಯಂತ ಪ್ರಶಂಸನೀಯವಾಗಿದ್ದುದರಿಂದ ನಾವು ಉತ್ತೇಜನಗೋಂಡು ಅದನ್ನು ಮತ್ತೊಂದುಭಾರಿ ಅಭಿನಯಿಸಿದೆವು.

ಈ ಹಬ್ಬದ ಕಾರ್ಯಕಾರೀ ಸಮಿತಿಯು ಬಂದಿದ್ದ ಅತಿಥಿಗಳೆಲ್ಲರನೂ ಅಭಿನಂದಿಸಿ ಎಲ್ಲರಿಗೂ ಸುಂದರವಾದ ಹೂ ಗುಚ್ಚಗಳನ್ನು ಕೊಟ್ಟಿದ್ದು ಬಹಳ ಪ್ರಶಂಸನೀಯ.

ಕೊನೆಯದಾಗಿ ನಮಗೆಲ್ಲರಿಗೂ ರಸದೌತಣದೊರೆತು ಕೋಲಾಟನೃತ್ಯದೊಂದಿಗೆ ಸಮಾರಂಭವು ಮುಕ್ತಾಯವಾಯಿತು. ಅದು ಒಂದು ಸಂಪೂರ್ಣ, ಸಂತೋಷಕರ ಮತ್ತು ಸಫಲವಾದ ಕನ್ನಡಬಳಗ ಸಮಾರಂಭವಾಗಿದ್ದಿತು.